UASB
LIBRARY
Newspaper Clippings
Pg .1 Friday16-04-2021 Jai Kisan



ಗ್ರಾಹಕರ ಮನೆಗೇ ಬರಲಿದೆ ಮಾವು !

ಬೆಂಗಳೂರು: ಮಾವು ಬೆಳೆಗಾರರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಹಾಗೂ ಕೊರೊನಾ ತಡೆಗೆ ಪೂರಕವಾಗಿ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆನಿಗಮ 'ಕರ್‌ಸಿರಿ ಪೋರ್ಟಲ್' 'ಅಭಿವೃದ್ಧಿಪಡಿಸಿದೆ ಎಂದು ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ವಿ ನಾಗರಾಜು ತಿಳಿಸಿದರು.

'ಕರ್‌ಸಿರಿ ಪೋರ್ಟಲ್' ಉದ್ಘಾಟನೆ ಸಂಬಂಧ ಮಾವು ಅಭಿವೃದ್ಧಿ ನಿಗಮವು ಲಾಲ್‌ಬಾಗ್‌ನ ತೋಟಗಾರಿಕೆ ಮಾಹಿತಿ ಕೇಂದ್ರ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಾವು ಬೆಳೆಗಾರರು ಮತ್ತು ಗ್ರಾಹಕರ ಅನುಕೂಲಕ್ಕಾಗಿ ಪೋರ್ಟಲ್ ಪರಿಚಯಿಸಲಾಗಿದ್ದು, ಗ್ರಾಹಕರು ಆನ್‌ಲೈನ್ ಮೂಲಕ ಮಾವಿನ ಹಣ್ಣು ಖರೀದಿಸಬಹುದು. ಗ್ರಾಹಕರು ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿದರೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಅಂಚೆ ಮೂಲಕ ಮಾವು ತಲುಪಿಸಲಾಗುವುದು ಎಂದರು.

ಈ ಬಾರಿ 17 ಜಿಲ್ಲೆಗಳಿಂದ 14 ಲಕ್ಷ ಟನ್ ಮಾವು ನಿರೀಕ್ಷಿಸಲಾಗಿತ್ತು. ಫೆಬ್ರವರಿ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯಿಂದ ಕೇವಲ 9 ರಿಂದ 10 ಟನ್ ಮಾವು ಬೆಳೆ ಬಂದಿದೆ. ಕಳೆದ ವರ್ಷ ಜನರು ಪೋರ್ಟಲ್ ಮೂಲಕ 100 ಟನ್ ಮಾವನ್ನು ಖರೀದಿ ಮಾಡಿದ್ದರು. ಇದರಿಂದ ರೈತರಿಗೆ 1.5 ಕೋಟಿ ರೂ. ಹಣ ಜಮೆ ಆಗಿದೆ. ಈ ಬಾರಿ ಪೋರ್ಟಲ್‌ನ ಮೂಲಕ 500 ಟನ್ ಮಾರಾಟದ ಗುರಿ ಇದೆ ಎಂದು ಮಾಹಿತಿ ನೀಡಿದರು.

ಸರ್ಕಾರಕ್ಕೆ ಪ್ರಸ್ತಾವನೆ: ದೆಹಲಿಯಲ್ಲಿ ರಾಜ್ಯದ



ಮಾವು ಅಭಿವೃದ್ಧಿ ನಿಗಮದ ವತಿಯಿಂದ ಲಾಲ್‌ಬಾಗ್‌ನ ತೋಟಗಾರಿಕೆ ಮಾಹಿತಿ ಕೇಂದ್ರ ಸಭಾಂಗಣದಲ್ಲಿ ಮಾವು ಹಣ್ಣುಗಳನ್ನು ಪ್ರದರ್ಶಿಸಲಾಯಿತು. ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ವಿ ನಾಗರಾಜು ಇತರರು ಹಾಜರಿದ್ದರು.

ವಿವಿಧ ತಳಿಯ ಮಾವುಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ ಮಾವು ಮೇಳ ನಡೆಸಲು ತೋಟಗಾರಿಕೆ ಇಲಾಖೆ ಮುಂದಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರ ಅನುಮತಿ ನೀಡಿದ ಕೂಡಲೇ ದೆಹಲಿಯಲ್ಲಿ ಮಾವು ಮೇಳ ನಡೆಸಲಾಗುವುದು ಎಂದು ಮಾವು ಅಭಿವೃದ್ಧಿ ನಿಮಗದ ಅಧ್ಯಕ್ಷ ಕೆ.ವಿ.ನಾಗರಾಜು ತಿಳಿಸಿದರು.

ಬಿಎಎಫ್ ಸಂಸ್ಥೆಯವರು https://forms.gle/FAdsZwhKmnQbUWiE7 ಲಿಂಕ್ ಸಿದ್ಧಪಡಿಸಿದ್ದು, ಈ ಲಿಂಕ್ ಮೂಲಕ ವಸತಿ ಸಮುಚ್ಛಯದಲ್ಲಿ ಇರುವವರು ಮಾವು ಖರೀದಿಸಬಹುದು. ಮಾಹಿತಿಗೆ https://karsirimangoes.karnataka.gov.in ವೆಬ್‌ಸೈಟ್ ಅಥವಾ 6366783105 ಸಂಪರ್ಕಿಸಬಹುದು ಎಂದು ತಿಳಿಸಿದರು. ತೋಟಗಾರಿಕಾ ಇಲಾಖೆ ನಿರ್ದೇಶಕಿ ಬಿ. ತೌಜಿಯಾ ತರನುಮ್ ಮಾತನಾಡಿದರು. ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಉಪ ನಿರ್ದೇಶಕ ಗುಣವಂತ ಹಾಗೂ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಸ್.ಐ.ಹಿತ್ತಲಮನಿ ಇತರರಿದ್ದರು.

For more information visit
University Library Website
Web - uasbagrilibindia.org
E-mail- librarian@uasbangalore.edu.in

15-04-2021
Uv Pg 05

ವರ್ಷಾರಂಭದಲ್ಲೇ ಮಳೆ: ಕೃಷಿ ಚಟುವಟಿಕೆಯಲ್ಲಿ ತೊಡಗಲು ಸಜ್ಜಾದ ರೈತರು

ಬೇಸಿಗೆಯಲ್ಲೂ ತಂಪಾಗಿಸಿದ ಮಾಗಿ ಮಳೆ

• ಸುಪ್ರತೀಕ್ ಹಳೇಮನೆ

ತಿಪಟೂರು: ವಾಡಿಕೆಯಂತೆ ವರ್ಷದ ಪ್ರಾರಂಭ ದಲ್ಲಿಯೇ ಪೂರ್ವ ಮುಂಗಾರು ಮಳೆಯಾಗಿದೆ. ರೈತರು ಮಾಗಿ ಉಳುಮೆಗೆ ಮುಂದಾಗಿದ್ದಾರೆ. ಯುಗಾದಿ ವರ್ಷಾರಂಭದಲ್ಲೇ ಮೊದಲ ಅಶ್ವಿನಿ ಮಳೆಗೆ ಅಲ್ಲಲ್ಲಿ ಭೂಮಿ ತಂಪಾಗಿದೆ. ಇದರಿಂದಾಗಿ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಲು ಸಜ್ಜಾಗಿದ್ದಾರೆ.

ಮಾಗಿ ಉಳುಮೆ ಹಿಂಗಾರು ಬೆಳೆಕಟಾವಾಗಿ ಭೂಮಿಯಲ್ಲಿ ತೇವಾಂಶ ಪಿದ್ದಾಗ ಮುಂಗಾರು ಮಳೆ ಬಿಳುವುದು. ತಕ್ಷಣವೇ ಉಳುಮೆ ಮಾಡುವ ಪ್ರಕ್ರಿಯೆಗೆ ಮಾಗಿ ಉಳುಮೆ ಎನ್ನುವರು. ಮಾಗಿ ಉಳುಮೆಯಿಂದ ಹಲವು ಪ್ರಯೋಜನಗಳಿವೆ. ಮಳೆ ನೀರು ಸ್ಥಳದಲ್ಲೇ ಇಂಗಿ ಹೆಚ್ಚು ಕಾಲ ತೇವಾಂಶ ಉಳಿದು ಮುಂದಿನ ಬೇಸಾಯ ಕೈಗೊಳ್ಳಲು ಹಾಗೂ ಅಂತರ್ಜಲ ಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ.

ಮಣ್ಣಿನಫಲವತ್ತತೆಹೆಚ್ಚಲಿದೆ: ಅಲ್ಲದೇ ಭೂಮಿ



ಯಲ್ಲಿರುವ ಕಳೆ ಬೀಜ, ಕೋಶಾವ್ಯವಸ್ಥೆಯಲ್ಲಿರುವ ಕೀಟಗಳು, ರೋಗಕಾರಕ ಶಿಲೀಂಧ್ರಗಳನ್ನು ಹೊರ ಹಾಕಿದಾಗ ಗಾಳಿ, ಬಿಸಿಲು, ಹಕ್ಕಿಗಳಿಂದ ನಾಶವಾಗುತ್ತವೆ. ಬಹು ಮುಖ್ಯವಾಗಿ ಭೂಮಿಯ ಮೇಲೆ ಬಿದ್ದಿರುವ ಎಲೆ, ಕಸ-ಕಡ್ಡಿ, ಕೂಳೆ ಇತ್ಯಾದಿಗಳು ಭೂಮಿಯೊಳಗೆ ಸೇರಿ ಕೊಳೆತು ಮಣ್ಣಿನ ಸಾವಯವ ಇಂಗಾಲ ಹೆಚ್ಚಿ ಫಲವತ್ತತೆ ವೃದ್ಧಿ ಆಗುತ್ತದೆ.

> ಕೃಷಿ ಇಲಾಖೆ ಮಾರ್ಗದರ್ಶನದಂತೆ ಮಾಗಿ ಉಳುಮೆ ಮಾಡಲಾಗುತ್ತಿದೆ. ಮಣ್ಣಿನ ಫಲವತ್ತತೆ ಹೆಚ್ಚಿಸುವ ಜೊತೆಗೆ ಭೂಮಿಯನ್ನು ಹದ ಮಾಡಿಕೊಂಡಿದ್ದು ಉತ್ತಮ ಬೆಳೆಯ ನಿರೀಕ್ಷೆಯಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.
> ■ ಯೋಗೀಶ್,
> ವಾಸುದೇವರಹಳ್ಳಿ ಗ್ರಾಮದ ರೈತ

> ಕೃಷಿಗೆ ಬೇಕಾದ ರಸಗೊಬ್ಬರ ದಾಸ್ತಾನು ಇದೆ. ಬಿತ್ತನೆ ಬೀಜ ವಾರದಲ್ಲಿ ಮಾರುಕಟ್ಟೆಗೆ ಬರಲಿದೆ. ರೈತರಿಗೆ ಅನುಕೂಲವಾಗುವಂತೆ ವಿತರಣೆ ಮಾಡಲಾಗುವುದು. ಅಲ್ಲದೇ, ವಿವಿಧ ಕಡೆಯಲ್ಲಿ ರೈತರ ಜಮೀನುಗಳಿಗೆ ಖುದ್ದು ಭೇಟಿ ನೀಡಿ ಅಗತ್ಯ ಮಾಹಿತಿ ಒದಗಿಸಲಾಗುತ್ತಿದೆ.
> ■ ಡಾ.ಎನ್.ಕೆಂಗೇಗೌಡ,
> ಸಹಾಯಕ ಕೃಷಿ ನಿರ್ದೇಶಕ

ಕೊಟ್ಟಿಗೆ ಗೊಬ್ಬರ ಹಾಕುವ ಸಮಯ: ರೈತರು ಮಾಗಿ ಉಳುಮೆ ಪೂರ್ವದಲ್ಲಿ ಸಾವಯವ ಗೊಬ್ಬರ ಅಥವಾ ಕೊಟ್ಟಿಗೆ ಗೊಬ್ಬರ ಇದ್ದಲ್ಲಿ ಜಮೀನಿಗೆ ಹಾಕಿ ನಂತರ ಉಳುಮೆ ಮಾಡುವುದರಿಂದ ಮಣ್ಣಿನಲ್ಲಿ ಚೆನ್ನಾಗಿ ಬೆರೆತು ಬೆಳೆಗಳಿಗೆ ಹೆಚ್ಚಿನ ಪೋಷಕಾಂಶಗಳು ಸುಲಭವಾಗಿ ಲಭಿಸುತ್ತವೆ. ಪೂರ್ವ ಮುಂಗಾರಿನಲ್ಲಿ ಸುಮಾರು 7 ರಿಂದ 8 ಸಾವಿರ ಹೆಕ್ಟರ್‌ನಷ್ಟು ಉಳುಮೆ ಮಾಡಿದರೆ, ಮುಂಗಾರು ಮಳೆಗೆ ಸುಮಾರು 25 ಸಾವಿರ ಹೆಕ್ಟರ್‌ನಷ್ಟು ಭೂಮಿಯನ್ನು ರೈತರು ಉಳುಮೆ ಮಾಡುವರು.

ಆಲಸಂದೆ, ಉದ್ದು, ಎಳ್ಳು ಬಿತ್ತನೆಗೆ ತಯಾರಿ

ವಾಡಿಕೆಯಂತೆ ಪೂರ್ವ ಮುಂಗಾರು ಬೆಳೆಗಳಾದ ಹೆಸರು, ಆಲಸಂದೆ, ಉದ್ದು ಹಾಗೂ ಎಳ್ಳು ಬಿತ್ತನೆಗೆ ಪೂರ್ವ ತಯಾರಿಯಾಗಿ ಮಾಗಿ ಉಳುಮೆಯನ್ನು ರೈತರು ಮಾಡುವರು. ಇದರಿಂದಾಗಿ ಉತ್ತಮ ಬೆಳೆ ಬೆಳೆಯಲು ಅನುಕೂಲವಾಗಲಿದೆ ಎಂಬುದು ಕೃಷಿ ತಜ್ಞರ ಅಭಿಪ್ರಾಯ.

15-04-2021 Hd Pg 02

"It's a slow process but quitting won't speed it up"